ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ಸಚಿವರು),—

ಅ) ೧-೧೦-೧೯೫೬ ಹೌದು. ನಷ್ಟಕ್ಕೆ ಕಾರಣಗಳು ಈ ಕೆಳಕಂಡಂತಿವೆ :

೧. ಹಳೆಯ ಯಂತ್ರೋಪಕರಣಗಳಿಂದಾಗಿ ಪ್ರತಿ ಬೇಸನ್ನಿನ ಉತ್ಪಾದನೆ ಕಡಿಮೆಯಾಗಿರುವುದು.

೨. ಮಯಸ್ಸಾದ ಕೆಲಸಗಾರರಿಂದ ಉತ್ಪಾದನೆ ಕಡಿಮೆಯಾಗಿರುವುದು.

೩. ಕಾಲಾನುಕಾಲಕ್ಕೆ ಟ್ರೂಸ್ ಅಗ್ರಿಮೆಂಟ್ ಪ್ರಕಾರ ಇತರೆ ಸೇವಾ ಕೊಡುಗೆಗಳು ಹೆಚ್ಚುವರಿಯಾಗಿರುವುದು.

೪. ವೇಲಾಡಳಿತ ವೆಚ್ಚ ಹೆಚ್ಚುವರಿಯಾಗಿರುವುದು.

೫. ಕಾರ್ಮಿಕರ ಆರೋಗ್ಯ ನಿಧಿ ಮತ್ತು ಭವಿಷತ್ನಿಯ ಸೌಲಭ್ಯಗಳನ್ನು ನೀಡುತ್ತಿರುವುದಂ

ಆ) ಜನರಲ್ ಮ್ಯಾನೆಜರ್‌ರವರುಗಳಿಗೆ ಸರ್ಕಾರವೇ ಅಧಿಕಾರ ಮತ್ತು ಕರ್ತವ್ಯವನ್ನು ನಿಗದಿಪಡಿಸಿದೆ. ಅಧೀನ ನೌಕರರಿಗೆ ಸಂಬಂಧಪಟ್ಟ ಜನರಲ್ ಮ್ಯಾನೇಜರ್‌ರವರೇ ಅಧಿಕಾರ ಮತ್ತು ಕರ್ತವ್ಯದ ವರದಿಯನ್ನು ಕಾಲಕಾಲಕ್ಕೆ ನಿಗದಿಗೊಳಿಸುತ್ತಾರೆ.

ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಕೈಗಾರಿಕೆಗಳ ನೌಕರರ ಬಗ್ಗೆ

೧೩೬೧. ಶ್ರೀ ಕೆ. ಎನ್. ಸೋಮಸುಂದರಂ (ಕೃಷ್ಣರಾಜ).— ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಒಟ್ಟಿನ ನೌಕರರ ಮತ್ತು ಕಾರ್ಮಿಕರ ಸಂಖ್ಯೆ ಎಷ್ಟು ?

ಆ) ಅದರಲ್ಲಿ ಪರಿಶಿಷ್ಟ ಜಾತಿಯವರು ಹಾಗೂ ಇತರರು ಎಷ್ಟು ?

ಇ) ಈ ಉದ್ಯಮಗಳಲ್ಲಿ ಜನರಲ್ ಮ್ಯಾನೆಜರ್, ಫ್ಯಾಕ್ಟರಿ ಮ್ಯಾನೆಜರ್ ಅಸಿಸ್ಟೆಂಟ್ ಫ್ಯಾಕ್ಟರಿ ಮ್ಯಾನೆಜರ್ ಪರ್ಚೆಸಿಂಗ್ ಅಸಿಸ್ಟೆಂಟ್ ಮತ್ತು ಸ್ಟೋರ್ ಕೀಪರ್‌ಗಳಿಗೆ ಅಧಿಕಾರ ಮತ್ತು ಕರ್ತವ್ಯವನ್ನು ನಿಗಧಿ ಮಾಡಲಾಗಿದೆಯೇ ?

ಈ) ಇಲ್ಲದಿದ್ದರೆ ಇದಕ್ಕೆ ಕಾರಣವೇನು ?

ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ಸಚಿವರು).

ಅ) ನೌಕರರು : ೧೨೯ ಕಾರ್ಮಿಕರು : ೨೪೭

ಆ) ನೌಕರರು : ಪರಿಶಿಷ್ಟ ಜಾತಿಯವರು ೫೨ ಇತರರು ೭೭
ಕಾರ್ಮಿಕರು : ಪರಿಶಿಷ್ಟ ಜಾತಿಯವರು ೪೭೮ ಇತರರು ೨೬೯

ಇ) ಜನರಲ್ ಮ್ಯಾನೇಜರ್‌ರವರುಗಳಿಗೆ ಸರ್ಕಾರವೇ ಅಧಿಕಾರ ಮತ್ತು ಕರ್ತವ್ಯವನ್ನು ನಿಗದಿಪಡಿಸಿದೆ ಅಧೀನ ನೌಕರರಿಗೆ ಸಂಬಂಧಪಟ್ಟ ಜನರಲ್ ಮ್ಯಾನೇಜರ್‌ರವರೇ ಅಧಿಕಾರ ಮತ್ತು ಕರ್ತವ್ಯದ ವರದಿಯನ್ನು ಕಾಲಕಾಲಕ್ಕೆ ನಿಗಧಿಗೊಳಿಸುತ್ತಾರೆ.

ಈ) ಅನ್ವಯಿಸುವುದಿಲ್ಲ.

ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಕೈಗಾರಿಕೆಗಳ ಬಗ್ಗೆ

೧೩೬೨. ಶ್ರೀ ಕೆ. ಎಸ್. ಸೋಮಸುಂದರಂ (ಕೃಷ್ಣರಾಜ).— ಮಾನ್ಯ ರೇಷ್ಮೆ ಇಲಾಖೆಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೇಷ್ಮೆ ಇಲಾಖೆಯ ಅಧೀನದಲ್ಲಿರುವ ಕೈಗಾರಿಕೆಗಳು ಹಾಗೂ ಹೊರ ಮಂತ್ರಾ ನೇಯ್ಕೆ ಘಟಕಗಳು ಯಾವುವು ?

ಆ) ಈ ರೇಷ್ಮೆ ಘಟಕಗಳನ್ನು ಸರ್ಕಾರ ವಹಿಸಿಕೊಂಡ ದಿನಾಂಕ ಯಾವುದಂ ?

ಇ) ಅಂದಿನಿಂದಲೂ ಈ ಉದ್ಯಮಗಳು ನಷ್ಟದಲ್ಲಿ ನಡೆಯುತ್ತಿವೆಯೇ ?

ಈ) ಹಾಗಿದ್ದಲ್ಲಿ ಈ ನಷ್ಟಕ್ಕೆ ಕಾರಣಯಾರು ?

ಉ) ಇದಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ಸಚಿವರು).—

ಅ) ೧. ಸರ್ಕಾರಿ ರೇಷ್ಮೆ ಕಾರ್ಖಾನೆ, ಕೊಳ್ಳೇಗಾಲ

೨. ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೇಮರಹಳ್ಳಿ

೩. ಸರ್ಕಾರಿ ರೇಷ್ಮೆ ಕಾರ್ಖಾನೆ, ಚಾಮರಾಜನಗರ

೪. ಸರ್ಕಾರಿ ರೇಷ್ಮೆ ಕಾರ್ಖಾನೆ, ಮಾಂಬಳ್ಳಿ

೫. ಸರ್ಕಾರಿ ರೇಷ್ಮೆ ಹುರಿ ಮತ್ತು ನೇಯ್ಗೆ ಕಾರ್ಖಾನೆ, ಮಾಡಿಗುಂಡಂ

ಆ) ೧–೧೦–೧೯೫೬

ಇ) ಹೌದು.

ಈ) ನಷ್ಟಕ್ಕೆ ಕಾರಣಗಳು :

೧. ಹಳೆಯ ಯಂತ್ರೋಪಕರಣಗಳಿಂದಾಗಿ ಪ್ರತಿ ಬೇಸಿನ್ನಿನ ಉತ್ಪಾದನೆ ಕಡಿಮೆಯಾಗಿರುವುದು.

೨. ವಯಸ್ಸಾದ ಕೆಲಸಗಾರರಿಂದ ಉತ್ಪಾದನೆ ಕಡಿಮೆಯಾಗಿರುವುದು.

೩. ಕಾಲಾನುಕಾಲಕ್ಕೆ ಟ್ರೂಸ್ ಅಗ್ರಿಮೆಂಟ್ ಪ್ರಕಾರ ಇತರೆ ಸೇವಾ ಕೊಡುಗೆಗಳೂ ಹೆಚ್ಚುವರಿಯಾಗಿರುವುದು.

೪. ಮೇಲಾಡಳಿತ ವೆಚ್ಚ ಹೆಚ್ಚುವರಿಯಾಗಿರುವುದು.

೫. ಕಾರ್ಮಿಕ ಆರೋಗ್ಯ ನಿಧಿ ಮತ್ತು ಭವಿಷತ್ ನಿಧಿಯ ಸೌಲಭ್ಯಗಳನ್ನು ನೀಡಂತ್ತಿರುವುದು.

೬. ರೇಷ್ಮೆ ಇಲಾಖೆಯ ಹಿತದೃಷ್ಟಿಯಿಂದ ರೇಷ್ಮೆ ಗೂಡುಗಳನ್ನು ಅದರಲ್ಲೂ ದ್ವಿತಳಿ ಗೂಡುಗಳನ್ನು ಕಡ್ಡಾಯವಾಗಿ ಖರೀದಿಸುತ್ತಿರುವುದು.

೭. ರೇಷ್ಮೆ ದಾರ ಬಿಚ್ಚುವ ನೂತನ ಉದ್ಯಮಿಗಳಿಗೆ ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ಈ ಕಾರ್ಖಾನೆಗಳಲ್ಲಿ ತರಬೇತಿಯನ್ನು ನೀಡುತ್ತಿರುವುದು,

೮. ಆಕಸ್ಮಿಕ ರೀಲರುಗಳು ಮುಷ್ಕರ ಕಾಲದಲ್ಲಿ ರೇಷ್ಮೆ ಕಾರ್ಖಾನೆಗಳೇ ಎಲ್ಲಾ ರೇಷ್ಮೆ ಗೂಡುಗಳನ್ನು ವಿವಿಧ ಮಾರಂಕಟ್ಟೆಗಳಿಂದ ಖರೀದಿಸುವುದು.

೯. ಪ್ರತಿ ದಿನ ರೇಷ್ಮೆ ಕಾರ್ಖಾನೆಗಳಿಗೆ ಬೇಕಾಗಿರುವ ೩೦೦೦ ರಿಂದ ೪೦೦೦ ಕೆ.ಜಿ. ರೇಷ್ಮೆ ಗೂಡುಗಳನ್ನು ಸುಮಾರು ೧೨೦ ರಿಂದ ೧೫೦ ಮಂದಿ ರೇಷ್ಮೆ ಬೆಳೆಗಾರರಿಂದ ಖರೀದಿಸಿರುವುದರಿಂದ ರೇಷ್ಮೆ ಗೂಡಿನ ವೈವಿಧ್ಯತೆ ಉಂಟಾಗುವುದಲ್ಲದೆ ರೇಷ್ಮೆ ನೂಲಿನ ಗುಣಮಟ್ಟದಲ್ಲಿ ಏರುಪೇರಾಗುವುದು.

ಉ) ೧. ಉತ್ಪಾದಿಸಿದ ರೇಷ್ಮೆ ಗುಣಮಟ್ಟವನ್ನು ಉತ್ತಮಗೊಳಿಸುವುದು.

೨. ಕೇಂದ್ರೀಕೃತ ರೇಷ್ಮೆ ಗೂಡು ಖರೀದಿಸುವ ನಿಯೋಗದ ಮೂಲಕ ಗೂಡು ಖರೀದಿಸುವುದು.

೩. ಪ್ರತಿ ಬೇಸಿನ್ನಿನ ರೇಷ್ಮೆ ಉತ್ಪಾದನೆಯಲ್ಲಿ ಹೆಚ್ಚಳ.

೪. ರೆಂಡಿಟಾ ಉತ್ತಮಪಡಿಸುವುದು.

೫. ಉತ್ಪಾದನಾ ಆಧಾರಿತ ಹಾಗೂ ಉತ್ತಮ ದರ್ಜೆ ರೇಷ್ಮೆ ಉತ್ಪಾದನೆಗೆ ಉತ್ತೇಜನಾ ಬೋನಸ್ ನೀಡುವುದು.

೬. ಉತ್ಪಾದಿಸಿದ ರೇಷ್ಮೆ ಮಾರಾಟದ ಬೆಲೆಯಲ್ಲಿ ಗೂಡಿನ ವೆಚ್ಚ (ಕಡಿಮೆ ಕಾಸ್ಟ್) ಮರಳಿ ಪಡೆಯುತ್ತಿರುವುದು.

೭. ಕೆಲಸಗಾರರಿಗೆ ಉತ್ತೇಜನ ನೀಡಲು ಪ್ರಶಸ್ತಿಗಳನ್ನು ನೀಡುವುದು.

೮. ಬೆಲೆ ಅನುಕೂಲವಿದ್ದಾಗ ರೇಷ್ಮೆ ದಾರವನ್ನು ಮಾರಾಟ ಮಾಡುವುದು.

೯. ವಯಸ್ಸಾದ ಕಾರ್ಮಿಕರಿಗೆ ಸ್ವಇಚ್ಛಾ ನಿವೃತ್ತಿಗೊಳ್ಳಲು ಅವಕಾಶ ಮಾಡಿಕೊಡುವುದು

೧೦. ಮಧ್ಯಂತರ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಹಾಗೂ ಉತ್ತಮ ಉತ್ಪಾದನೆ ಹಾಗೂ ಗುಣಮಟ್ಟದ ರೇಷೆ ನೂಲು ತಯಾರಿಸಲು ವಂಲ್ಟಿಯೊಂಡ್ ಬೇಸಿನ್‌ಗಳನ್ನು ಪ್ರಯೋಗಾತ್ಮಕವಾಗಿ ಅಳವಡಿಸುವುದು.

ವಿದ್ಯುಚ್ಛಕ್ತಿ ಸಬ್‌ಸ್ಟೇಷನ್–ಮಂಡಬಿದ್ರೆ

೧೫೪೧. ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ)—ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೂಡಬಿದ್ರೆಯ ವಿದ್ಯುಚ್ಛಕ್ತಿಯ ಸಬ್ ಸ್ಟೇಷನ್ ಮಂಜೂರಾಗಿದ್ದು ಇದರ ಕಟ್ಟಡದ ಕಾರ್ಯ ಯಾವ ಹಂತದಲ್ಲಿದೆ ?

ಆ) ಈ ಸಬ್‌ಸ್ಟೇಷನ್ನಿಗೆ ಬೇಕಾದ ಉಪಕರಣಗಳನ್ನು ಪಡೆಯಲಾಂ ವ್ಯವಸ್ಥೆ ಮಾಡಲಾಗಿದೆಯೇ?

ಇ) ಇದರ ಕಾರ್ಯವು ಯಾವಾಗ ಪೂರ್ತಿಗೊಂಡು ಜನ ಉಪಯೋಗಕ್ಕೆ ಬರುವುದು ?

ಈ) ಇದರ ಕಾರ್ಯ ಬಹಳ ನಿಧಾನವಾಗಿ ಸಾಗುತ್ತಿರಲು ಕಾರಣವೇನು ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

ಅ) ಮೂಡಬಿದ್ರೆ ವಿದ್ಯುಚ್ಛಕ್ತಿ ಉಪ–ಕೇಂದ್ರದ ಕಟ್ಟಡದ ನಿರ್ಮಾಣ ಕಾರ್ಯ ಇನ್ನೂ ಪ್ರಾರಂಭವಾಗಿಲ್ಲ.

ಆ) ಈ ವಿದ್ಯುತ್ ಉಪ–ಕೇಂದ್ರಕ್ಕೆ ಬೇಕಾಗಿರುವ ಟ್ರಾನ್ಸ್‌ಫಾರ್ಮರ್, ಐಸೋಲೇಟರ್ಸ್ ಇತ್ಯಾದಿ ಉಪಕರಣಗಳನ್ನು ಪಡೆಯಲು ವ್ಯವಸ್ಥೆ ಮಾಡಲಾಗಿದೆ.

ಇ) ಈ ಸಬ್ ಸ್ಟೇಷನ್ ೧೯೯೧–೯೨ರಲ್ಲಿ ಕಾರ್ಯಾರಂಭ ಮಾಡುವ ನಿರೀಕ್ಷೆಯಿದೆ.

ಈ) ಈ ಸಬ್ ಸ್ಟೇಷನ್‌ಗೆ ಬೇಕಾಗಿರುವ ಖಾಸಗಿ ಜಮೀನನ್ನು ಸ್ವಾಧೀನ ಪಡೆಯುವಲ್ಲಿ ಆದ ವಿಳಂಬದಿಂದ ಇದರ ಕೆಲಸ ನಿಧಾನವಾಗಿದೆ.

ಅಂಗನವಾಡಿ ಕಾರ್ಯಕರ್ತೆಯರ ವರ್ಗಾವಣೆ ಬಗ್ಗೆ.

೧೫೪೧. ಶ್ರೀ ಪ್ರಭಾಕರ್ ಎಸ್. ರಾಣೆ (ಕಾರವಾರ).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅಂಗನವಾಡಿ ಕಾರ್ಯಕರ್ತೆಯರನ್ನು ವರ್ಗಾವಣೆ ಮಾಡಲು ಅವಕಾಶವಿದೆಯೇ ?

ಆ) ಉತ್ತರ ಕನ್ನಡ ಜಿಲ್ಲಾ ಪರಿಷತ್‌ನವರು ಅಂಗನವಾಡಿ ಕಾರ್ಯಕರ್ತೆಯರನ್ನು ವರ್ಗಾವಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವೀರಪ್ಪ ಮೋಯ್ಲಿ (ಸಮಾಜ ಕಲ್ಯಾಣ ಸಚಿವರ ಪರವಾಗಿ).—

ಅ) ಹೌದು.

ಆ) ಬಂದಿದೆ.